# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 486 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-09-2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

****

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಯಲಹಂಕ ವಲಯದ ವ್ಯಾಪ್ತಿಯಲ್ಲಿರುವ ಎಂ.ಎಸ್. ಪಾಳ್ಯದಲ್ಲಿರುವ ಸುಬ್ಬಣ್ಣ ಬಡಾವಣೆ, ಸುಬ್ಬಣ್ಣ ರಸ್ತೆ, ಬಸವಲಿಂಗಪ್ಪ ನಗರ 2ನೇ ಮುಖ್ಯರಸ್ತೆ ಹಾಗೂ ಅಟ್ಟೂರು ವಾರ್ಡ್ ಸಂಖ್ಯೆ 3 ತುಂಬಾ ಜನನಿಬಿಡ ಪ್ರದೇಶವಾಗಿದ್ದು ಸದರಿ ಬಡಾವಣೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ ಹಾಗೂ ಸರಿಯಾದ ರಸ್ತೆಗಳಿಲ್ಲದೆ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಯಲಹಂಕ ವಲಯದ ವ್ಯಾಪ್ತಿಯಲ್ಲಿರುವ ಎಂ.ಎಸ್. ಪಾಳ್ಯದಲ್ಲಿರುವ ಸುಬ್ಬಣ್ಣ ಬಡಾವಣೆ ಸುಬ್ಬಣ್ಣ ರಸ್ತೆ, ಬಸವಲಿಂಗಪ್ಪ ನಗರ 2ನೇ ಮುಖ್ಯರಸ್ತೆ, ಹಾಗೂ ಅಟ್ಟೂರು ವಾರ್ಡ್ ಸಂಖ್ಯೆ 3 ರ ಕೆಲವು ಪ್ರದೇಶಗಳು 110 ಹಳ್ಳಿಗಳ ವ್ಯಾಪ್ತಿಗೆ ಒಳಪಟ್ಟಿದ್ದು ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ 110 ಹಳ್ಳಿಗಳಿಗೆ ನೀರನ್ನು ಒದಗಿಸಲು ಕಾವೇರಿ 5ನೇ ಹಂತದ ಕಾಮಗಾರಿಯನ್ನು ಕೈಗೊಂಡಿದ್ದು ಸದರಿ ಕಾಮಗಾರಿಗಳು 2023ರ ಅಂತ್ಯಕ್ಕೆ ಮುಕ್ತಾಯಗೊಳ್ಳಲು ಯೋಜಿಸಲಾಗಿದ್ದು, ಪೂರ್ಣಗೊಂಡ ನಂತರ ಸದರಿ ಪ್ರದೇಶಗಳಿಗೆ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲಾಗುತ್ತದೆ.<br><br>ಅಟ್ಟೂರು ವಾರ್ಡ್ ಸಂಖ್ಯೆ 3ರ ಈ ಕೆಳಗೆ ತಿಳಿಸಿರುವಂತಹ ಪ್ರದೇಶಗಳಿಗೆ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿರುತ್ತದೆ ಹಾಗೂ ಸದರಿ ವ್ಯವಸ್ಥೆಯನ್ನು ಬೆಂಗಳೂರು ಜಲಮಂಡಳಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ. |
| ಆ | ಹಾಗಿದ್ದಲ್ಲಿ, ಈ ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು; (ವಿವರಗಳನ್ನು ನೀಡುವುದು) | |

| | ಸಿ.ಎಂ.ಸಿ ಪ್ರದೇಶಗಳು | ಬಿ.ಬಿ.ಎಂ.ಪಿಯ ಕೋರ್ ಏರಿಯಾ ಪ್ರದೇಶಗಳು |
|---|---|---|
| ಅಟ್ಟೂರು ವಾರ್ಡ್ ಸಂಖ್ಯೆ 3 | ಅಟ್ಟೂರು ಬಡಾವಣೆಯ 1ರಿಂದ 11ನೇ ಮುಖ್ಯ ರಸ್ತೆ, ಎ.ಇ.ಎಸ್ ಬಡಾವಣೆ, ಅಕ್ಷಯ ನಗರ, ತಿರುಮಲನಗರ, ಮುನೇಶ್ವರ ಬಡಾವಣೆ, ಸಂತೋಷ್ ನಗರ, ಎಸ್‌ಕಾರ್ಟ್ಸ್ ಬಡಾವಣೆ, ಚಿಕ್ಕದಿಣ್ಣೆ, ಚಿತ್ರಾ ಬಡಾವಣೆ | ಎಸ್.ಎಫ್.ಎಸ್ 707, 408, 208 ಗೃಹ ಮಂಡಳಿಯ ಪ್ರದೇಶಗಳು |

| | | |
|---|---|---|
| ಇ | ಸದರಿ ಬಡಾವಣೆಗಳ ಪ್ರತಿಯೊಂದು ಮನೆಗಳ ಮಾಲೀಕರುಗಳಿಂದ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಗುತ್ತಿಗೆದಾರರು ರೂ. 10 ಸಾವಿರಗಳನ್ನು ಅಕ್ರಮವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯಾವುದೇ ದೂರುಗಳು ಬಂದಿರುವುದಿಲ್ಲ. |
| ಈ | ಹಾಗಿದ್ದಲ್ಲಿ ಅಂತಹ ಗುತ್ತಿಗೆದಾರರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಗುತ್ತಿಗೆದಾರರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳ ಸಂಪೂರ್ಣ ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |
| ಉ | ಈ ಎಲ್ಲಾ ಬಡಾವಣೆಗಳಲ್ಲಿ ಶಿಥಿಲವಾಗಿರುವ ರಸ್ತೆಗಳಿಗೆ ಡಾಂಬರೀಕರಣವನ್ನು ಮಾಡಿ ಸಾರ್ವಜನಿಕರ ಸಂಚಾರಕ್ಕೆ ಯೋಗ್ಯ ರಸ್ತೆಗಳನ್ನು ನಿರ್ಮಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; ಯಾವ ಕಾಲಮಿತಿಯೊಳಗಾಗಿ ಸದರಿ ರಸ್ತೆಗಳನ್ನು ದುರಸ್ಥಿಗೊಳಿಸಲಾಗುವುದು? (ವಿವರಗಳನ್ನು ನೀಡುವುದು) | ಸದರಿ ಬಡಾವಣೆಗಳಲ್ಲಿ ಹೊಸದಾಗಿ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸರ್ಕಾರದ ಅನುದಾನ ಮಂಜೂರಾಗಿದ್ದು, ಟೆಂಡರ್ ಪ್ರಗತಿಯಲ್ಲಿರುತ್ತದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕಾಮಗಾರಿ ಪೂರ್ಣಗೊಂಡ ನಂತರ ಸದರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುವುದು. |

**ಸಂಖ್ಯೆ: ನಅಇ 41 ಎಂಎನ್‌ಐ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ